# ಕೂಗದೆ ಉಸುರಿಕ್ಕದೆ ನೀವು

1. **Ref.:** Shri Purandara Dasara Sahitya Part – 4, Krishna Leele, edited by Shri Betageri Krishna Sharma and Shri Bengeri Huchhu Rayaru, page No. 62.
2. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 190.
3. **Note:** Lyrics given without highlights are as per Ref. 1 and the wordings given in yellow highlights are as per Ref. 2.
4. **Note:** Ankita is different in both the books. We have considered Ref.1 as standard and taken that Ankita for listing.

ರಾಗ: ಕನ್ನಡ ಕಾಂಬೋಧಿ ತಾಳ: ಅಟ

ಕೂಗದೆ ಉಸುರಿಕ್ಕದೆ ನೀವು
ಬೇಗನೆ ಬನ್ನಿ ರಂಗ ಮನೆಯ ಪೊಕ್ಕ ‖ ಪ ‖

ಹೆಜ್ಜೆಗಳಿವೆಕೋ ಮನೆಯಲಿ-ಕಾಲ
ಗೆಜ್ಜೆಯ ದನಿ ಕೇಳಬರುತಲಿದೆ
ನಿರ್ಜರಪತಿ ತನ್ನ ಮನಸಿಗೆ ಬಂದಂತೆ
ಮಜ್ಜಿಗೆ ಒಕುಳಿ ಆಡಿಹನಕ್ಕ ‖ 1 ‖

ಸೂರಿನ ಕೆಳಗೆ ಕುಳ್ಳಿರಿಸಿ – ತನ್ನ
ಓರಗೆ ಮಕ್ಕಳುಗಳ ನಿಲ್ಲಿಸಿ
ಕೇರಿ ಕೇರಿಯಿಂದ ಗೋಡೆ ಧುಮುಕಿ ಪೋಗಿ
ಸೂರೆಗೊಳ್ಳುತಾನೆ ಸುಮ್ಮಗೆ ಬನ್ನಿ ‖ 2 ‖

ಹಾಲು ಚೆಲ್ಲಿ ಹಳ್ಳ ಹರಿದಿಹವೆ – ಮೊಸರ
ಮೇಲಿನ ಕೆನೆಗಳು ಬಳಿದಿಹವೆ
ಬಾಲ ಚೋರ ಶ್ರೀ ಪುರಂದರ ವಿಠಲನು
ಚಾಲುವರಿದರಿನ್ನು ಬಿಡಬಾರದಕ್ಕ ‖ 3 ‖

ರಾಗ: ಪಂತುವರಾಳಿ ತಾಳ: ಅಟ

ಕೂಗದೆ ಉಸಿರಿಕ್ಕದೆ, ನೀವು, ಬೇಗ
ಬೇಗನೆ ಬನ್ನಿ, ರಂಗ ಮನೆಯ ಪೊಕ್ಕ

ಸೂರಿ ಕೆಳಗೆ ನಿಂದಾರಿಸಿ ತನ್ನ
ವಾರಿಗೆಯ ಮಕ್ಕಳನು ಕೂಡಿಸಿ
ಹಾರಿ ಗೋಡೆಯನು ಧುಮುಕಿ ಒಳಗೆ ಪೊಕ್ಕು
ಸೂರೆಗೊಳ್ಳುತಾನೆ ಸುಮ್ಮನೆ ಬನ್ನಿ

ಹೆಜ್ಜೆಗಳಿವೆ ನಮ್ಮ ಮನೆಯಲ್ಲಿ, ಕಾಲು-
ಗೆಜ್ಜೆಯ ಧ್ವನಿ ಕೇಳಿ ಬರುತಲಿದೆ
ನಿರ್ಜನರ ಕಂಡು ರಂಗ ಮನೆಯ ಪೊಕ್ಕು
ಮಜ್ಜಿಗೆಲೋಕುಳಿಯಾಡುವ ನಮ್ಮ

ಹಾಲು ಚೆಲ್ಲಿ ಹಳ್ಳ ಮುಂದೆ ಹರಿದಿದೆ
ಮೇಲೆ ಮೊಸರು ಕೆನೆ ಚೆಲ್ಲಾಡಿವೆ
ಲೀಲೆ ಹೀಗೆಯಾಡುತಲೈದನೆ
ಬಾಳ ಚೋರ ಗುರು ಪುರಂದರ ವಿಠಲ

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ಕಳ್ಳ ಕೃಷ್ಣನನ್ನು ಹಿಡಿಯಬೇಕೆಂದು ಹೊಂಚುಹಾಕಿದ ಗೊಲ್ಲತಿಯರು ಹೇಳಿದ ಮಾತುಗಳು ಈ ಹಾಡಿನಲ್ಲಿವೆ.

**ನಿರ್ಜರಪತಿ** = ದೇವತೆಗಳ ಒಡೆಯ

**ಒಕುಳಿಯಾಡು** = ಸೂರೆಮಾಡು

**ಚಾಲುವರಿ** = ಹಂಬಲಿಸಿ ಬೇಡಿಕೊ

**Classification:** Keerthane
**Ankita:** sri purandara vittala
**Location:** NA
**Category:** Krishna Leele
**Sub-Category:** Krishna, gopi, ranga, mane, gejje, ADu, ATa, keri, makkalu, halu, kalla,
**Pravachana:** NA
**Explanation:** NA